ಶ್ರೀ ಜಿ. ರಾಮೇಗೌಡ.—ಸಾಸಲು ಹೋಬಳಿ ಬಹಳ ಹಿಂದುಳಿದ ಹೋಬಳಿ ಆದ್ದರಿಂದ 5, 10, 20 ಸಾವಿರ ರೂಪಾಯಿಗಳ ಕೆಲಸ ತೆಗೆದುಕೊಳ್ಳುವುದಕ್ಕೆ ಹಣ ಇಲ್ಲ ಎಂದು ಹೇಳಿ ತ್ತೀರಲ್ಲಾ ಇದು ನ್ಯಾಯವೇ, ಸ್ವಾಮಿ ?

†ಶ್ರೀ ಆಲೂರು ಹನುಮಂತಪ್ಪ.—ಹಣ ಇಲ್ಲ ಎಂದು ಹೇಳಿಲ್ಲ. ಈಗ ಆ ಹೋಬಳಿಯಲ್ಲಿ ಈಗಾಗಲೇ ಎ ಸ್ಟಿಮೇಟ್ ಸಿದ್ಧವಾಗಿರುವುದು ಹೇಳಿದ್ದೇನೆ ಮತ್ತು ಆ ತಾಲ್ಲೂಕಿನಲ್ಲಿರತಕ್ಕ 23 ಸ್ಪಿರ್ ಓವರ್ ವರ್ಕ್ಸ್ ಮೇಲೆ ಹಣವನ್ನು ಖರ್ಚು ಮಾಡುತ್ತಾ ಇದ್ದೇವೆ. ಮುಂದೆ ಹಣದ ಪರಿಸ್ಥಿತಿ ಸುಧಾರಿಸಿದ ಮೇಲೆ ಇನ್ನೂ ಹೆಚ್ಚು ಕೆಲಸ ತೆಗೆದುಕೊಳ್ಳುವಾಗ ಅದನ್ನು ಪರಿಶೀಲನೆಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ.—ಈಗ ಸದ್ಯಕ್ಕೆ ಈ ಹೋಬಳಿಯಲ್ಲಿ ಸ್ಪಿರ್ ಓವರ್ ವರ್ಕ್ಸ್‌ಗೆ ಇರತಕ್ಕ ಮೊಬಲಗು ಎಷ್ಟು ?

ಶ್ರೀ ಆಲೂರು ಹನುಮಂತಪ್ಪ.—ಹೋಬಳಿದು ಹೇಳಲಕ್ಕೆ ಆಗುವುದಿಲ್ಲ. 23 ಲಕ್ಷ ರೂಪಾಯಿನ ಸ್ಪಿರ್ ಓವರ್‌ನಲ್ಲಿ 20 ಲಕ್ಷ ರೂಪಾಯಿ ಆ ತಾಲ್ಲೂಕಿನಲ್ಲಿ ಖರ್ಚು ಮಾಡಿದ್ದೇವೆ. ಮತ್ತು ಇತ್ತೀಚೆಗೆ 2 ಲಕ್ಷ 86 ಸಾವಿರ ರೂಪಾಯಿನ ಹೊಸ 8 ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಅಲ್ಲದೆ ಸುಮಾರು 8 ಲಕ್ಷ ರೂಪಾಯಿ ಒಂದು ದೊಡ್ಡ ಕೆಲಸ, ಕೋಡಿ ಕೆಲಸವನ್ನು ಸಹ ತೆಗೆದು ಕೊಂಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—5 ವೆರೈಟಿ ಪ್ರಾಜೆಕ್ಟ್ಸ್ ಇವೆ. ಇದರಲ್ಲಿ ಯಾವುದಕ್ಕಾದರೂ ಪ್ರಯಾರಿಟಿ ಕೊಟ್ಟು ಕೊನೆ ಪಕ್ಷ 5-6 ಕೆಲಸವಾದರೂ 67ನೇ ಮಾರ್ಚ್ 31 ರೊಳಗೆ ಮಾಡಿ ಮುಗಿಸು ವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಈಗ ಸರ್ವೆ ಆಗಿರತಕ್ಕ ಕೆಲಸದಲ್ಲಿ ಈ 8 ಕೆಲಸ ಸೆಲೆಕ್ಟ್ ಮಾಡಿಕೊಂಡಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರ ಅಭಿಪ್ರಾಯವನ್ನೂ ಸಹ ತೆಗೆದುಕೊಂಡಿದ್ದೇವೆ. ಜೊತೆಗೆ ಈಗ ಸರ್ವೆ ಆಗಿರುವುದು ನಾನಾ ಹಂತದಲ್ಲಿದೆ. ಸ್ಕ್ರುಟಿನಿ ಆಗಿರುವುದನ್ನು ಮುಂದೆ ಪರಿಶೀಲನೆಗೆ ತೆಗೆದುಕೊಳ್ಳುತ್ತೇವೆ.

1-30 P.M.

ಶ್ರೀ ಜಿ. ರಾಮೇಗೌಡ.—ಸರ್ಕಾರದವರು ಇಲ್ಲಿ ತೋರಿಸಿರತಕ್ಕ ಐಟಂ (17)ರಲ್ಲಿ ಕಂಡ ಕೆಲಸಕ್ಕೆ ಟೆಂಡರನ್ನು ಕರೆದು ಕೆಲಸವನ್ನು ಕೊಟ್ಟಮೇಲೂ ಅಲ್ಲೇಕೆ ಕೆಲಸವಾಗಿಲ್ಲ ?

ಶ್ರೀ ಆಲೂರು ಹನುಮಂತಪ್ಪ.—ಅದರಲ್ಲಿ ಕೆಲವು ಟೆಕ್ನಿಕಲ್ ಅಬ್‌ಜೆಕ್ಷನ್ಸ್ ಇದ್ದಕಾರಣ ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ.

ಶ್ರೀ ಜಿ. ರಾಮೇಗೌಡ.—ಮಧ್ಯೆ ಕೆಲಸವನ್ನು ನಿಲ್ಲಿಸಬೇಕಾಗುವುದೆಂಬುದು ಮೊದಲು ಗೊತ್ತಾಗಲಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಪರಿಶೀಲನೆ ಮಾಡಿದ ನಂತರವೇ ಅದನ್ನು ನಿಲ್ಲಿಸಿದ್ದು.

Intensive paddy cultivation scheme.

*Q.—77. Sri B. BHASKAR SHETTY (Kaup).—

Will the Minister for Agriculture be pleased to state :—

(*a*) when the "intensive paddy cultivation" scheme came into effect in South Kanara District ;

(*b*) what is the total amount allotted for implementing the scheme for the above district and for how long it is going to continue ;

(*c*) what is the staff appointed for implementing the scheme and the expenditure incurred so far and the expenditure proposed to be incurred thereon ;

(*d*) what is the benefit, the ryots are going to get under this scheme ?

A.—Sri H. C. BORAIAH (Parliamentary Secretary to Minister for Agriculture).—

(*a*) From Kharif Season 1964.

(*b*) *Year.*	*Budget allotment.* Rs.
1963-64	60,000
1964-65	69,000
1965-66	4,30,000

Scheme was sanctioned for Three years in the first instance upto end of 1965-66 and has been further continued.

(*c*) Deputy Director of Agriculture	...	1
Agricultural Extension Officers	...	16
Additional Village Level Workers	...	21
Jeep Driver	...	1
Expenditure incurred so for	Rs.	1,29,762.08 p,
Expenditure proposed	Rs.	90,238.00

(*d*) Seeds and fertilisers worth Rs. 50 per acre will be supplied to the ryots on loan basis from the nearest Co-operative Societies to the entire area proposed to be covered under the scheme.

Efforts are made to see that the cultivators adopt the package of practices recommended by the Department with the object of increasing the per acre yields of paddy.

ಶ್ರೀ ಬಿ. ಭಾನ್ಕರಸೆಟ್ಟಿ.—ಈಗ ಇಲ್ಲಿ ನಮಗೆ ಒದಗಿಸಿರತಕ್ಕ ಉತ್ತರದಲ್ಲಿ ಪ್ರಥಮತಃ ಈ ಯೋಜನೆಯನ್ನು ಮೂರು ವರ್ಷಗಳವರೆಗೆ ಎಂದರೆ 1965-66 ನೇ ಸಾಲಿನವರೆಗೆ ಮುಂಜೂರು ಮಾಡಲಾಗಿತ್ತು. ಮತ್ತು ಆದನ್ನೇ ಮುಂದುವರಿಸಲಾಯಿತು ಎಂದು ಹೇಳಿದೆ. ಹೀಗೇ ಇದನ್ನು ತಾವು ಎಲ್ಲಿಯವರೆಗೂ ಮುಂದುವರಿಸಬೇಕೆಂದಿದ್ದೀರಿ ?

† ಶ್ರೀ ಎಚ್. ಸಿ. ಬೋರಯ್ಯ.—ತಿಳುವಳಿಕೆ ಕೊಡುವವರೆಗೂ ಅಂತ ಹೇಳಲಾಗಿದೆ.

ಶ್ರೀ ಬಿ. ಭಾನ್ಕರಸೆಟ್ಟಿ.—ಸರ್ಕಾರದವರು ಈ ತೀವ್ರತಮ ಬತ್ತದ ಬೆಳೆಯ ಯೋಜನೆಯನ್ನು 1962 ರಿಂದಲೂ ಪ್ರಾರಂಭ ಮಾಡಿದ್ದಾರೆ. ಇದನ್ನು ಷುರು ಮಾಡುವುದಕ್ಕೆ ಮೊದಲು ಇಲ್ಲಿ ಎಷ್ಟು ಪ್ರದೇಶದಲ್ಲಿ ಭತ್ತದ ಬೆಳೆಯಾಗುತ್ತಿತ್ತು, ಸರ್ಕಾರದವರು 5 ಲಕ್ಷ 99 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದಮೇಲೆ ಎಷ್ಟು ಹೆಚ್ಚಿಗೆ ಬೆಳೆಯಾಗಿದೆ ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರಗಳೆಲ್ಲಾ ತಮಗೆ ಬೇಕಾಗಿದ್ದರೆ ಪ್ರತ್ಯೇಕ ಪ್ರಶ್ನೆಹಾಕಿ, ಆಗ ಅದಕ್ಕೆ ಉತ್ತರಗಳನ್ನು ಒದಗಿಸರಾಗುವುದು. ಸಧ್ಯಕ್ಕೆ ಆ ವಿವರಗಳು ನನ್ನಲ್ಲಿಲ್ಲ.

ಶ್ರೀ ಟಿ. ಮಾದಯ್ಯಗೌಡ.—ತೀವ್ರತಮ ಬೇಸಾಯದ ಗುರಿಯೇನು ? ಸರ್ಕಾರದವರು ಇದನ್ನು ಪ್ರಾರಂಭಮಾಡಿದ ನಂತರ ಇಲ್ಲಿಯವರೆಗೆ ಎಷ್ಟು ಹೆಚ್ಚು ಬೆಳೆಯನ್ನು ಬೆಳೆದಿದ್ದಾರೆ ? ಆ ಅಂಕಿ ಅಂಶಗಳು ಇಲ್ಲವೆಂದು ಹೇಳುವುದಾದರೆ ಸರ್ಕಾರದ ಸಿಬ್ಬಂದಿ ಏಕೆ ಇರಬೇಕು ?

(*No answer*)

ಶ್ರೀ ಜಿ. ವಿ. ಗೌಡ.—ಒಂದು ಎಕರೆಯಲ್ಲಿ ಮೊದಲು ಏನು ಬೆಳೆಯಾಗುತ್ತಿತ್ತು, ಈಗ ಇದನ್ನು ಜಾರಿಗೆ ತಂದಮೇಲೆ ಒಂದು ಎಕರೆಯಲ್ಲಿ ಎಷ್ಟು ಜಾಸ್ತಿ ಬೆಳೆಯಾಗಿದೆ ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರಗಳು ಸಧ್ಯಕ್ಕೆ ನನ್ನಲ್ಲಿಲ್ಲ. ಮುಂದೆ ಬೇಕಾದರೆ ಒದಗಿಸರಾಗುವುದು.

Sri SANJEEVANATH AIKALA.—What is the difference between intensive paddy cultivation programme and package programme and what is the allotment in each case ?

ಶ್ರೀ ಎಚ್. ಸಿ. ಬೋರಯ್ಯ.—ಅದಕ್ಕೆ ನಾನು ಪ್ರತ್ಯೇಕ ಪ್ರಶ್ನೆ ಹಾಕಿ ಎಂಬುದಾಗಿ ಆಗಲೇ ಹೇಳಿದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಇದುವರೆಗೂ ಆಗಿರತಕ್ಕ ಖರ್ಚಿನಲ್ಲಿ ಪ್ರಜಾ ವರ್ಗಕ್ಕೆ ಉಪಯೋಗವಾಗತಕ್ಕ ಖರ್ಚೆಷ್ಟು ಮತ್ತು ಅಡ್ಮಿನಿಸ್ಟ್ರೇಟಿವ್ ಖರ್ಚೆಷ್ಟು ?

ಶ್ರೀ ಎಚ್. ಸಿ. ಬೋರಯ್ಯ.—ಅದನ್ನು ಕೊಡಲಾಗಿದೆ.

Sri SANJEEVANATH AIKALA.—Does it bring grace or dignity to an Hon'ble Minister to say that the answers to a supplementary in regard to a programme which they are implementing now will be given at a later stage. I want to raise a question of privilege over this issue.

Mr. SPEAKER.—I will take this question of privilege soon after the question Hour.

Sri SANJEEVANATH AIKALA.—Please give me some time.

Mr. SPEAKER.—I will hear the Hon'ble Member tomorrow about it.

ಶ್ರೀ ಬಿ. ಭಾನ್ಕರಸೆಟ್ಟಿ.—ತೀವ್ರತಮ ಬೇಸಾಯವನ್ನು ಪುರು ಮಾಡುವಾಗ ಏನು ಟಾರ್ಗೆಟ್ಟನ್ನು ನಿಗದಿ ಮಾಡಿತ್ತು, ಈಗ ಅದನ್ನು ಎಲ್ಲಿಯವರೆಗೆ ಸಾಧಿಸಿದೆ ?

ಅಧ್ಯಕ್ಷರು.—ಅದಕ್ಕಾಗಲೇ ನೋಟೀಸ್ ಬೇಕೆಂದು ಹೇಳಿದ್ದಾರೆ.

ಶ್ರೀ ಎಚ್. ಸಿ. ಬೋರಯ್ಯ.—ಈ ಯೋಜನೆಯನ್ನು 1964-65 ರ ಉತ್ತರಾರ್ಧದಲ್ಲಿ ಪ್ರಾರಂಭ ಮಾಡಲಾಯಿತು. ಒಂದು ಲಕ್ಷ ಎಕರೆ ಭೂಮಿಯನ್ನು ಕವರ್‌ಮಾಡಬೇಕೆಂದಿತ್ತು. ಆ ಪೈಕಿ 43,800 ಎಕರೆಗಳನ್ನು ಈಗ ಕವರ್ ಮಾಡಲಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—48 ಸಾವಿರ ಎಕರೆಗಳನ್ನು ಕವರ್‌ಮಾಡಿ ಎಷ್ಟು ಹೆಚ್ಚಿನ ಭತ್ತವನ್ನು ಬೆಳೆದು ಅದನ್ನು ಬೆಂಗಳೂರಿಗೆ ಸಾಗಿಸಲಾಯಿತು ?

† ಶ್ರೀ ಜಿ. ನಾರಾಯಣಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ದಕ್ಷಿಣ ಕನ್ನಡ ಜಿಲ್ಲೆಯಿಂದ ಬರತಕ್ಕ ಮಾನ್ಯ ಸದಸ್ಯರಿಗೆಲ್ಲಾ ಇದರ ವಿಚಾರ ಗೊತ್ತಿದೆ. ಆದರೆ ಖಚಿತವಾಗಿ ಇಷ್ಟೇ ಬರುತ್ತದೆಂದು ಹೇಳುವುದಕ್ಕಾಗದಿದ್ದರೂ ಮೊದಲಿಗಿಂತ ಹೆಚ್ಚಿಗೆ ಇಳುವರಿ ಇದೆಯೆಂದು ಹೇಳುತ್ತೇನೆ.

ಶ್ರೀ ಬಿ. ಭಾನ್ಕರಸೆಟ್ಟಿ.—ಪ್ರತಿಯೊಬ್ಬ ರೈತನಿಗೂ 50 ರೂಪಾಯಿಗಳ ಬೀಜ ಮತ್ತು ಗೊಬ್ಬರವನ್ನು ಸಾಲದ ರೂಪದಲ್ಲಿ ಒದಗಿಸಲಾಗುವುದೆಂದು ಇಲ್ಲಿ ಹೇಳಿದ್ದಾರೆ, ಆ ರೀತಿ ಇಲ್ಲಿಯವರೆಗೂ ರಾಜ್ಯದಲ್ಲಿ ಎಷ್ಟು ಜನರಿಗೆ ಈ ಸೌಲಭ್ಯವನ್ನೊದಗಿಸಿದ್ದೀರಿ ?

ಶ್ರೀ ಜಿ. ನಾರಾಯಣಗೌಡ.—ಈಗ 43 ಸಾವಿರ ಎಕರೆಯನ್ನು ಕವರ್ ಮಾಡಲಾಗಿದೆ. ಅಲ್ಲಿ ಇರತಕ್ಕ ಜನರಿಗೆಲ್ಲಾ ಈ ಸಹಾಯವನ್ನು ಒದಗಿಸಲಾಗಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಸರ್ಕಾರದವರೇನೋ 43 ಸಾವಿರ ಎಕರೆಗಳನ್ನು ತೀವ್ರತಮ ಬೇಸಾಯಕ್ಕೆ ತರಲಾಗಿದೆ ಎಂದು ಹೇಳಿದರೂ, ಇವರು ಜಾರಿಗೆತಂದಿರುವ ಕಡೆಯಲ್ಲಿ ಎಕರೆಗೆ 1200 ಪೌಂಡುಗಳಿಗಿಂತಲೂ ಇಳುವರಿ ಜಾಸ್ತಿಯಾಗಿಲ್ಲವೆಂದು ಹೇಳುತ್ತೇನೆ, ಸರಿಯೇ ?

ಶ್ರೀ ಜಿ. ನಾರಾಯಣಗೌಡ.—ಎಕರೆಯ ಇಳುವರಿ ಮೊದಲಿಗಿಂತಲೂ ಜಾಸ್ತಿ ಎಂದು ನಾನಾಗಲೇ ಹೇಳಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದ. ಕನ್ನಡ ಜಿಲ್ಲೆಯಲ್ಲಿ ಹೇರಳವಾಗಿ ನೀರಿನ ಸೌಕರ್ಯ ಇದೆಯೆಂದು ಅಲ್ಲಿ ಇಂಟೆನ್ಸೀವ್ ಪ್ಯಾಡಿ ಕಲ್ಟಿವೇಷನ್ನನ್ನು ಜಾರಿಗೆ ತರಲಾಯಿತು, ಅಲ್ಲಿ ಹೊಸ ನಮೂನೆ ಬೀಜ ಮತ್ತು ಗೊಬ್ಬರಗಳನ್ನು ಕೊಟ್ಟನಂತರ ಎಕರೆಯಲ್ಲಿ ಎಷ್ಟು ಇಳುವರಿ ಜಾಸ್ತಿಯಾಗಿದೆ ?

ಶ್ರೀ ಜಿ. ನಾರಾಯಣಗೌಡ.—ಮೊದಲು ಅಲ್ಲಿ ಎಕರೆಗೆ ಸರಾಸರಿ 7 ಪಲ್ಲಾ ಬೆಳೆಯುತ್ತಿತ್ತು, ಈಗ ಅದು 9 ಪಲ್ಲಕ್ಕೇರಿದೆ.

ಶ್ರೀ ಬಿ. ಭಾನ್ಕರಸೆಟ್ಟಿ.—ತೀವ್ರತಮ ಬೇಸಾಯದ ಮುಖ್ಯ ಮಾರ್ಪಾಡುಗಳೇನು ?

Sri G. V. GOWDA.—May I draw the attention of Government to Question (*d*) what is the benefit that the ryot was expected to achieve per acre and what is the benefit already achieved ?

ಶ್ರೀ ಜಿ. ನಾರಾಯಣಗೌಡ.—ನಾನು ಈ ಮೊದಲೇ ಹೇಳಿದೆ. ಎಲ್ಲೆಲ್ಲಿ ನಾವು ನೂತನ ವಿಧಾನಗಳನ್ನು ಅನುಸರಿಸಿ ಬೇಸಾಯ ಮಾಡುತ್ತಿದ್ದೇವೋ ಅಲ್ಲಿ ಹಿಂದೆ ಬರುತ್ತಿದ್ದ ಪ್ರತಿಫಲಕ್ಕಿಂತ ಈಗ ಬರುವುದು ಹೆಚ್ಚಾಗಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಅಗ್ರಿಕಲ್‌ಚರ್ ಎಕ್ಸ್‌ಟೆನ್‌ಷನ್ ಮಾಡಲಕ್ಕಾಗಿ ಇಲ್ಲಿ ಒಬ್ಬರು ಅಫೀಸರು ಅಡಿಷನಲ್ ಏಜೇಜು ವರ್ಕರು, ಏಜೇಜು ಲೆವಲ್‌ನಲ್ಲಿ ಹೆಚ್ಚು ಲಕ್ಷ್ಯ ಕೊಟ್ಟು ಕೆಲಸ ಮಾಡುವವರು ಇರುವಾಗ ಇವರನ್ನೆಲ್ಲಾ ನೋಡಿ ಮೇಲ್ವಿಚಾರಣೆ ಮಾಡಲು ಒಬ್ಬರು ಅಧಿಕಾರಿಗಳಿದ್ದರೆ ಸಾಕು. ಇದಕ್ಕೆ ಡಿ.ಸಿ. ಇದ್ದಾರೆ ಹಾಗೂ ಅಗ್ರಿಕಲ್‌ಚರು ಡೈರಕ್ಟರು ಎನ್ನುವ ಅಧಿಕಾರಿಗಳಿದ್ದಾರೆ. ಇವರುಗಳು ಕೆಲಸ ಮಾಡುವುದಕ್ಕೆ ತೊಂದರೆ ಇದೆಯೇ? ಎರಡನೇದಾಗಿ ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಅಧಿಕಾರಿಗಳಲ್ಲಿ ಪಕ್ಕಲು ತನ ಮಾಡುವವರಿಗೆ ಸರಿಯಾಗಿ ಸಂಬಳ ಸಾರಿಗೆಗಳನ್ನು ಕೊಡುತ್ತಿಲ್ಲ ಇದರಿಂದ ಕಷ್ಟಗಳಾಗುತ್ತಿವೆ ಎಂದು ಕಂಡು ಬರುತ್ತಿದೆ. ಇದರ ವ್ಯವಸ್ಥೆಯನ್ನು ಸುಧಾರಿಸಲು ಸರಕಾರ ಪ್ರಯತ್ನ ಮಾಡುವುದು ಸರಿಯಲ್ಲವೇ?

ಶ್ರೀ ಜಿ. ನಾರಾಯಣ ಗೌಡ.—ಈ ವಿಷಯ ನನಗೆ ತಿಳಿದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ವ್ಯವಸಾಯ ಸಚಿವರು ಇತ್ತೀಚೆಗೆ ಜಪಾನು ಪ್ರವಾಸ ಮಾಡಿಕೊಂಡು ಬಂದಾಗ ಹೇಳಿದರು ಜಪಾನಿನಲ್ಲೇ ಐದು ದಿನಗಳ ಕಾಲ ಇದ್ದು ಅಲ್ಲಿನ ಬೇಸಾಯ ಪದ್ಧತಿಗಳನ್ನು ನೋಡಿಕೊಂಡು ಬಂದು ಇಲ್ಲಿ ಒಂದು ಕಡೆ ಭಾಷಣ ಮಾಡುವಾಗ ಹೇಳಿದರು ಹಿಂದೆ ಹತ್ತು ಕ್ವಿಂಟಾಲುಗಳಷ್ಟು ಭತ್ತ ಬರುತ್ತಿದ್ದುದು ಈಗ ಹದಿಮೂರು ಕ್ವಿಂಟಾಲುಗಳಷ್ಟು ಹೆಚ್ಚು ಬರುತ್ತಿದೆ ಎಂದು. ಆದರೆ ಈಗ ನೋಡಿದ್ದರಲ್ಲಿ ಹೊಸ ಸ್ಕೀಂ ಮಾಡಿದ್ದರಿಂದ ಹಿಂದೆ ಹತ್ತು ಕ್ವಿಂಟಾಲುಗಳಷ್ಟು ಬರುತ್ತಿದ್ದುದು ಈಗ ಒಂಬತ್ತು ಕ್ವಿಂಟಾಲುಗಳಿಗೆ ಇಳಿಯುತ್ತಿದೆ. ಇದಕ್ಕೆ ಕಾರಣವೇನು?

ಶ್ರೀ ಜಿ. ನಾರಾಯಣ ಗೌಡ.—ನಾನು ಹತ್ತರಿಂದ ಹದಿಮೂರು ಕ್ವಿಂಟಾಲುಗಳು ಎಂದು ಹೇಳಲಿಲ್ಲ. ಹಿಂದೆ ಏಳು ಕ್ವಿಂಟಾಲುಗಳಷ್ಟು ಇದ್ದುದು ಈಗ ಒಭತ್ತು ಕ್ವಿಂಟಾಲುಗಳಷ್ಟು ಮಾತ್ರ ಹೆಚ್ಚು ಬರುತ್ತಿದೆ ಎಂದು ಹೇಳಿದೆ.

ಶ್ರೀ ಜಿ. ಮಾದೇಗೌಡ.—ಬೇಸಾಯ ಮಾಡುವ ರೈತರಿಗೆ ಈ ಹೊಸ ಸ್ಕೀಂ ಜಾರಿಗೆ ತಂದುದರಿಂದ ಇಲ್ಲಿ ಎಷ್ಟು ಜನ ರೈತರಿಗೆ ಅನುಕೂಲವಾಗಿದೆ?

ಶ್ರೀ ಜಿ. ನಾರಾಯಣ ಗೌಡ.—ಆಗಲೇ ಹೇಳಿದಂತೆ 43 ಸಾವಿರ ಎಕರೆಗಳಷ್ಟು ಭೂಮಿಲ್ಲಿರುವ ರೈತರು ಯಾರ್ಯಾರು ಬರುತ್ತಾರೋ ಅವರಿಗೆಲ್ಲಾ ಅನುಕೂಲವಾಗಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಹದಿನೇಳೂವರೆ ಲಕ್ಷ ಜನರಿದ್ದಾರೆ. ಇದರ ಮೇಲೆ ಇಲ್ಲಿ ಪ್ಲೋಟಿಂಗ್ ಪಾಪ್ಯುಲೇಷನ್ನು ಬೇರೆ ಒಂದು ಲಕ್ಷ ಚಿಲ್ಲರೆ ಬರುತ್ತದೆ. ಇಲ್ಲಿ ಇಂಟೆನ್ಸಿವ್ ಕಲ್ಟಿವೇಷನ್ನು ಮಾಡಿ ಬೆಳೆಯನ್ನು ನರ್‌ಪ್ಲಸ್ ಆಗಿ ಮಾಡಲಕ್ಕೆ ಸಾಧ್ಯವಾಗಲಿಲ್ಲ ಎಂದು ಹೇಳುತ್ತೀನೆ. ತಾವೇನು ಇದರ ಬಗ್ಗೆ ಹೇಳುತ್ತೀರಿ?

ಶ್ರೀ ಜಿ. ನಾರಾಯಣ ಗೌಡ.—ಬೆಳೆಯನ್ನು ಹೆಚ್ಚು ಮಾಡಲು ಸಾಧ್ಯವಿಪೆ ಎಂದೇ ಈ ಹೊಸ ಬೇಸಾಯದ ಕ್ರಮವನ್ನು ಜಾರಿಗೆ ತಂದಿದ್ದೇವೆ.

Survey regarding cost of Cultivation.

*Q.—160. Sri S. KARIAPPA (Kanakapura).—

Will the Minister for Agriculture be pleased to state :—

(*a*) whether any survey regarding cost of cultivation per acre of paddy, ragi, wheat, jawar, coffee, potato and cotton in the State has been made;

(*b*) if so, the cost of cultivation of each of the above according to the State Survey with details of items of expenditure?

*A.—Sri G. NARAYANA GOWDA (Minister for Agriculture).—

(*a*) Yes. For paddy and ragi in Bangalore and Mandya Districts; for cotton in Northern Districts.

(*b*) *Vide* Statement pleaced on the Table of the House.**

‡ Copy placed in the Mysore Legislature Library, *Vide* No. 26, dated 22nd July 1966.